5031/6011/7011

II Semester 5 Year B.A.LL.B. (Maj.Min.System)/B.B.A.LL.B./B.Com.LL.B. Examination, April/May 2022 (Dec. 2021)
LAW OF TORTS

Duration : 3 Hours Max. Marks : 80

Instructions : 1. **Answer all five Units.**
2. **One essay type question and short note/problems is compulsory from each Unit.**
3. **Figures to the right indicate marks.**
4. **Answer should be written either in English or Kannada completely.**

UNIT – I

Q. No. 1. a) Explain the concepts of tortious liability. Distinguish between Tort and breach of contract. Marks : 10

ಅಪಕೃತ್ಯದ ಹೊಣೆಗಾರಿಕೆಯ ಮೇಲೆ ವಿವರಣೆ ಬರೆಯಿರಿ. ಅಪಕೃತ್ಯ ಮತ್ತು ಒಪ್ಪಂದದ ಚ್ಯುತಿ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

OR/ಅಥವಾ

Q. No. 1. a) Discuss the essential elements of tort. Marks : 10

ಅಪಕೃತ್ಯದ ಅವಶ್ಯಕ ಅಂಶಗಳ ಬಗ್ಗೆ ಚರ್ಚಿಸಿರಿ.

Q. No. 1. b) Malice in law. Marks : 6

ಕಾನೂನಿನ ಮತ್ಸರ.

OR/ಅಥವಾ

Q. No. 1. b) Write a note on "ubi jus ibi remedium". Marks : 6

"ಎಲ್ಲಿ ಹಕ್ಕಿದೆಯೋ ಅಲ್ಲಿ ಪರಿಹಾರವಿರುತ್ತದೆ" ಎಂಬುದರ ಕುರಿತು ಟಿಪ್ಪಣಿ ಬರೆಯಿರಿ.

UNIT – II

Q. No. 2. a) Define the doctrine of "volenti non fit injuria" as one of the good defences in tortious liability. Refer to decided cases. Marks : 10

"ಸ್ವ ಸಮ್ಮತಿಯಿಂದಾಗುವ ಹಾನಿಯು ಅಪಕೃತ್ಯವಲ್ಲ" ಎಂಬ ಸಿದ್ಧಾಂತವು ಅಪಕೃತ್ಯ ಹೊಣೆಗಾರಿಕೆಯಲ್ಲಿ ಒಂದು ಉತ್ತಮ ರಕ್ಷಣೆಯಾಗಿದೆ. ಪ್ರಕರಣಗಳೊಂದಿಗೆ ತಿಳಿಸಿರಿ.

OR/ಅಥವಾ

P.T.O.

Q. No. 2. a) Explain "vicarious liability" in which circumstances with the master be liable for the acts of his servant ? Marks : 10

"ಬದಲಿ ಹೊಣೆಗಾರಿಕೆ"ಯನ್ನು ವಿವರಿಸಿ, ಯಾವ ಸಂದರ್ಭಗಳಲ್ಲಿ ಮಾಲೀಕನು ಅವನ ಸೇವಕ ಮಾಡಿದ ಕೃತ್ಯಗಳಿಗೆ ಹೊಣೆಗಾರನಾಗುತ್ತಾನೆ ?

Q. No. 2. b) 'T' goes to see a motor car race as a spectator by purchasing a ticket. The car race is organised by one 'Suhan Co. Ltd., as a sportive amusement while 'T' is observing the race, there was a collision between two cars one of which was thrown among the spectators and 'T' sustained injuries. 'T' files a suit for compensation due to injury against 'Suhan Co.' Decide. Marks : 6

'T' ಎಂಬುವನು ಟಿಕೆಟ್ ಖರೀದಿಸಿ ಮೋಟರ್ ಕಾರ್ ರೇಸ್‌ಗೆ ವೀಕ್ಷಕನಾಗಿ ಹೋಗಿದ್ದನು. ಸದರಿ ಕಾರ್ ರೇಸನ್ನು ಕ್ರೀಡಾ ಮನೋರಂಜನಾ ರೂಪದಲ್ಲಿ "ಸುಹಾನ್ ಕಂಪನಿ ನಿಯಮಿತ" ಆಯೋಜಿಸಿತ್ತು. 'T' ನು ಕಾರ್ ರೇಸ್ ನೋಡುತ್ತಿರುವಾಗ ಎರಡು ಕಾರ್‌ಗಳು ಡಿಕ್ಕಿಯಾಗಿ ಅದರಲ್ಲಿ ಒಂದು ಕಾರು ವೀಕ್ಷಕರ ಮೇಲೆ ಬಂದು ಬಿತ್ತು. ಅದರಿಂದ 'T' ನಿಗೆ ಗಾಯವಾಯಿತು. ಸದರಿ ಗಾಯಗಳಿಗಾಗಿ ಪರಿಹಾರ ಪಡೆಯಲು 'T' ನು "ಸುಹಾನ ಕಂ." ವಿರುದ್ಧ ದಾವೆ ಮಾಡುತ್ತಾನೆ. ತೀರ್ಮಾನಿಸಿ.

OR/ಅಥವಾ

Q. No. 2. b) 'T' kept his scooty at X's garage for repair. After repair, the servant of 'X' has taken it outside the garage for a test drive and caused injury by accident to 'Y'. 'Y' has filed a case for compensation. Who will be liable for it ? Why ? Explain. Marks : 6

'T' ನು ತನ್ನ ಸ್ಕೂಟಿಯನ್ನು ರಿಪೇರಿಗಾಗಿ 'X' ನ ಗ್ಯಾರೇಜಿಗೆ ಬಿಟ್ಟಿರುತ್ತಾನೆ. ರಿಪೇರಿ ಆದ ಮೇಲೆ, 'X' ನ ಸೇವಕನು ಅದನ್ನು ಪರೀಕ್ಷಿಸಲು ಗ್ಯಾರೇಜಿನಿಂದ ಹೊರಗೆ ಚಲಾವಣೆ ಮಾಡುತ್ತಿರುವಾಗ Y'ಎಂಬ ವ್ಯಕ್ತಿಗೆ ಅಪಘಾತ ಮಾಡಿ ಗಾಯಗೊಳಿಸುತ್ತಾನೆ. Y'ನು ತನಗಾದ ಗಾಯಗಳಿಗಾಗಿ ಪರಿಹಾರ ಪಡೆಯಲು ಮಾಡಿದ ದಾವೆಯಲ್ಲಿ ಯಾರು ಹೊಣೆಗಾರರಾಗುತ್ತಾರೆ ? ಏಕೆ ? ವಿವರಿಸಿ.

UNIT – III

Q. No. 3. a) Discuss the essential requirements for "Nuisance". Marks : 10

"ಉಪದ್ರವ"ಕ್ಕೆ ಅವಶ್ಯಕವಾಗಿರುವ ಅಂಶಗಳನ್ನು ಚರ್ಚಿಸಿ.

OR/ಅಥವಾ

Q. No. 3. a) Write an elaborate statement on the concept of "remoteness of damages" with cases. Marks : 10

"ದೂರದ ನಷ್ಟ ಪರಿಹಾರಗಳು" ಎಂಬ ಪರಿಕಲ್ಪನೆ ಮೇಲೆ ಪ್ರಕರಣಗಳೊಂದಿಗೆ ಸವಿಸ್ತಾರವಾದ ಹೇಳಿಕೆ ಕೊಡಿ.

Q. No. 3. b) Write a note on 'Rylands v/s Fletcher'. Marks : 6

ರಾಯ್‌ಲ್ಯಾಂಡ್ಸ್ ವಿರುದ್ಧ ಫ್ಲೆಚರ ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 3. b) The husband of the petitioner boarded a bus. He was on the foot board when the driver attempted to overtake another stationary bus so close to it that the petitioners husband got serve injuries and died. The widow claims compensation. Decide. Marks : 6

ವಾದಿಯ ಪತಿಯು ಬಸ್ ಹತ್ತಿ ಇನ್ನೂ ಮೆಟ್ಟಿಲ ಬಳಿ ಇರುವಾಗಲೇ ಬಸ್ ಚಾಲಕನು ಅಲ್ಲಿ ನಿಂತಿದ್ದ ಇನ್ನೊಂದು ಬಸ್ಸನ್ನು ಅತ್ಯಂತ ಹತ್ತಿರದಿಂದ ಬಳಸಿ ಮುಂದೆ ಹೋಗುವಾಗ ಎರಡೂ ಬಸ್ಸುಗಳ ನಡುವೆ ಸಿಲುಕಿ ವಾದಿಯ ಪತಿಯು ತೀವ್ರ ಗಾಯಗೊಂಡು ಮರಣವನ್ನಪ್ಪುವನು. ವಾದಿಯು (ವಿಧವೆ) ಪರಿಹಾರ ಕೇಳುವಳು. ತೀರ್ಮಾನಿಸಿ.

UNIT – IV

Q. No. 4. a) Define defamation. What are the essentials of defamation ? Marks : 10

ಮಾನ ಹಾನಿಯನ್ನು ವ್ಯಾಖ್ಯಾನಿಸಿ. ಮಾನಹಾನಿಯ ಮುಖ್ಯಾಂಶಗಳು ಯಾವುವು ?

OR/ಅಥವಾ

Q. No. 4. a) Define "Assault" and distinguish it from "Battery". State the circumstances when they may be justified ? Marks : 10

ಹಲ್ಲೆಯನ್ನು ವ್ಯಾಖ್ಯಾನಿಸಿರಿ ಮತ್ತು ಪ್ರಹಾರದಿಂದ ಅದಕ್ಕಿರುವ ವ್ಯತ್ಯಾಸವನ್ನು ತಿಳಿಸಿರಿ. ಅವುಗಳನ್ನು ಯಾವ ಸಂದರ್ಭಗಳಲ್ಲಿ ಸಮರ್ಥಿಸಿಕೊಳ್ಳಬಹುದು ?

Q. No. 4. b) Newspaper publisher 'X' published in good faith a mistaken statement about 'Y' that 'Y' had given birth to twins. But 'Y' had been married only two months back. Now 'Y' has decided file a suit against 'X' publisher for defamation. Decide. Marks : 6

'X' ಎಂಬ ದಿನಪತ್ರಿಕೆಯ ಪ್ರಕಾಶಕರು ಸದುದ್ದೇಶದಿಂದ 'Y' ನ ಬಗ್ಗೆ ಒಂದು ತಪ್ಪು ವರದಿಯನ್ನು ಪ್ರಕಟಿಸಿ ಅದರಲ್ಲಿ 'Y' ಎಂಬುವವರು ಅವಳಿ ಮಕ್ಕಳಿಗೆ ಜನ್ಮ ನೀಡಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ 'Y' ಎಂಬುವವರು ಕೇವಲ ಎರಡು ತಿಂಗಳ ಹಿಂದೆಯಷ್ಟೇ ಮದುವೆಯಾಗಿರುತ್ತಾರೆ. ಈಗ 'Y' ಎಂಬುವವರು 'X' ಎಂಬ ಪ್ರಕಾಶಕರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡ ಬಯಸಿದ್ದಾರೆ. ಸಲಹೆ ಕೊಡಿ.

OR/ಅಥವಾ

Q. No. 4. b) Write a note on "Innuendo". Marks : 6

"ವ್ಯಂಗ್ಯೋಕ್ತಿ" ಮೇಲೆ ಟಿಪ್ಪಣಿ ಬರೆಯಿರಿ.

UNIT – V

Q. No. 5. a) Explain the composition and jurisdiction of the state consumer commission under the Consumer Protection Act, 2019. Marks : 10

ಗ್ರಾಹಕರ ಸಂರಕ್ಷಣಾ ಅಧಿನಿಯಮ, 2019 ರಡಿಯಲ್ಲಿ ರಾಜ್ಯ ಗ್ರಾಹಕ ಆಯೋಗದ ರಚನೆ ಮತ್ತು ಅಧಿಕಾರ ವ್ಯಾಪ್ತಿಯನ್ನು ವಿವರಿಸಿ.

OR/ಅಥವಾ

Q. No. 5. a) Explain the object and salient features of the Motor Vehicles Act, 1988. Marks : 10

ಮೋಟಾರು ವಾಹನಗಳ ಅಧಿನಿಯಮ, 1988 ರ ಉದ್ದೇಶ ಮತ್ತು ಪ್ರಮುಖ ಲಕ್ಷಣಗಳನ್ನು ವಿವರಿಸಿ.

Q. No. 5. b) Write a note on "product liability". Marks : 6

ಉತ್ಪನ್ನ ಹೊಣೆಗಾರಿಕೆ ಕುರಿತು ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. b) Write a note on deficiency in service. Marks : 6

ಸೇವೆಯಲ್ಲಿನ ನ್ಯೂನತೆ ಮೇಲೆ ಟಿಪ್ಪಣಿ ಬರೆಯಿರಿ.